

ತೊಂದರೆ ಕೊಡಬಾರದೆಂಬ ಕನಿಷ್ಠ ಸೌಜನ್ಯವೂ ಇಲ್ಲದಿರುವ ಪೊಲೀಸರ ಬಗ್ಗೆ ಅಸಹನೆ ಮೂಡಿದರೂ, ಸುರೇಶ್ ಯಾದವ್ ಎಂಬ ಹೊಸದಾಗಿ ಐಪಿಎಸ್ ಆದ ಎಸ್.ಪಿ. ಬಂದಾಗಿನಿಂದಲೂ ಇಡೀ ಊರಿನ ದಾಯಾದಿಗಳಂತಿದ್ದ ಕುಡಿಪುಡಿ ರೌಡಿಗಳೆಲ್ಲ ಬಾಲ ಮುದುರಿಕೊಂಡಿದ್ದುದು ಬೇಡವೆಂದರೂ ನೆನಪಾಗುತ್ತಿತ್ತು.

ಫೇಸ್‌ಬುಕ್‌ನಲ್ಲೋ, ಇನ್‌ಸ್ಟಾಗ್ರಾಂನಲ್ಲೋ, ವಾಟ್ಸಾಪ್‌ನಲ್ಲೋ ಏನಾದರೂ ಅಪಾಯಕಾರಿ ಸ್ಟೇಟಸ್ ಹಾಕಿದ್ದೇನೆಯೇ ಎಂದು ನೆನಪಿಸಿಕೊಂಡೆ. ಕಳೆದ ವಾರ ಗಾಂಧಿ ಜಯಂತಿಯ ಸಲುವಾಗಿ ಗಾಂಧಿಯ ಪೋರ್ಟ್‌ರೈಟ್‌ನ್ನು ಟೈಂಲಾಸ್ಟ್‌ನಲ್ಲಿ ಬರೆದದ್ದನ್ನು ಅಪ್‌ಲೋಡ್ ಮಾಡಿದ್ದು ಬಿಟ್ಟರೆ ಬೇರೆ ಯಾವುದೂ ನೆನಪಾಗಲಿಲ್ಲ. ಗೋಡ್ಸೆ ಬಗ್ಗೆ ಏನಾದರೂ ಬರೆದಿದ್ದರೆ ಹೆದರಬೇಕೇ ವಿನಾ ಗಾಂಧಿ ಬಗ್ಗೆ ಬರೆದರೆ ಯಾಕೆ ಹೆದರಬೇಕು ಎಂಬ ಆತ್ಮಸ್ಥೈರ್ಯ ಬಂದರೂ, ಈ ಕಾಲದಲ್ಲಿ ಗಾಂಧಿಯೇ ವಿಲನ್ ಆಗುತ್ತಿರುವುದರಿಂದ ಅದೂ ಅಪರಾಧವಾದೀತೇನೋ ಎಂಬ ಅಳುಕು ಒಂದು ಕ್ಷಣ ಬಂದುಹೋಗದಿರಲಿಲ್ಲ. ನಾನು ಸಣ್ಣವನಿದ್ದಾಗ ರಾಮ, ರಹೀಮ, ಕೃಷ್ಣ, ಕ್ರಿಸ್ತರಂತೆ ಗಾಂಧಿಯೂ ಇನ್ನೇನು ಕೆಲವೇ ವರ್ಷಗಳಲ್ಲಿ ದೇವರಾಗಿ ಹೋಗುತ್ತಾನೆ, ಅವನಿಗೂ ಗುಡಿಗಳನ್ನು ಕಟ್ಟುತ್ತಾರೆ ಎಂದು ಚರ್ಚಾಸ್ಪರ್ಧೆಯಲ್ಲಿ ವಾದಿಸಿದ್ದುದು ಸ್ವಾತಂತ್ರ್ಯ ಬಂದ ಕೇವಲ ಎಪ್ಪತ್ತೈದು ವರ್ಷಗಳಲ್ಲಿಯೇ ಸುಳ್ಳಾಗಿ ಹೋಗುತ್ತಿರುವ ಸತ್ಯ ಅರಿವಾಗಿ ಅಳುಕು ಮೂಡಿತು. ಗಾಂಧಿ, ಬಸವ, ಅಂಬೇಡ್ಕರ್ ಇವರೆಲ್ಲರ ತತ್ವಗಳ ಹಿಂದಿನ ಮೂಲಸೆಲೆ ಅಡಗಿರುವುದು ಬುದ್ಧನಲ್ಲಿ ಎಂದು ಅಂದು ಮಾಡಿದ್ದ ಭಾಷಣವನ್ನೇನಾದರೂ ಯಾರಾದರೂ ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಿದ್ದಾರೆಯೇ ಎಂಬ ಒಂದು ಸಣ್ಣ ಸೆಳಕೂ ಬಂದು ಹೋಯಿತು.

ಇನ್ನೂ ತಡೆಯಲಾಗಲಿಲ್ಲ. ಮಧ್ಯಾಹ್ನದ ಊಟವೂ ಸೇರಲಿಲ್ಲ. ಸೀದಾ ಗೇರುರಹಿತ ಸ್ಕೂಟರ್‌ನಲ್ಲಿ ಎಸ್.ಪಿ. ಆಫೀಸು ತಲುಪುವವರೆಗೂ ಸಮಾಧಾನವಿರಲಿಲ್ಲ. ನಡುಗುವ ತೊಳ್ಳೆಗಳಲ್ಲಿಯೇ ಅವರ ಚೇಂಬರ್‌ವರೆಗೆ ನಡೆದುಹೋಗಿ, 'ಸಾಹೇಬರು ಇದ್ದಾರೆಯೇ?' ಎಂದು ಗನ್ನು ಹಿಡಿದು ಪ್ರವೇಶದ್ವಾರದಲ್ಲೇ ಹೆದರಿಸುವವನಂತೆ ನಿಂತಿದ್ದ ಸೆಂಟ್ರಿಗೆ ಕೇಳಿ, 'ಇದ್ದಾರೆ' ಎಂಬ ಅವನ ಮಾತಿನಲ್ಲೇ ಒಳಹೋಗುವ ಅನುಮತಿ ಇರುವುದನ್ನು ಗ್ರಹಿಸಿ, ಅತ್ತ ಇತ್ತ ಯಾರಾದರೂ ಪರಿಚಯಸ್ಥರು ಕಂಡಾರೆಯೇ ಎಂಬ ಅಳುಕಿನಿಂದಲೇ ಎರಡನೇ ಮಹಡಿ ಹತ್ತಿದೆ. ಬಾಗಿಲಲ್ಲಿ ದಫೇದಾರನಂತೆ ನಿಂತಿದ್ದ ಗತ್ತಿನ ಮನುಷ್ಯನ ಮುಂದೆ ಬೆನ್ನು ಬಾಗಿಸುವವನಂತೆ, 'ಸಾಹೇಬರು ಬರಹೇಳಿದ್ದರು...' ಎಂದು ತೊದಲಿದೆ. ಆತನೂ ಮೇಲಿನಿಂದ ಕೆಳಗಿನ ತನಕ ಒಮ್ಮೆ ತನ್ನ ತೀಕ್ಷ್ಣ ಕಣ್ಣುಗಳಿಂದಲೇ ಕ್ಲೀನಾಗಿ ಸ್ಕ್ಯಾನ್ ಮಾಡಿ, ಚೀಟಿ ಬರೆದುಕೊಡುವಂತೆ ಬಾಗಿಲಲ್ಲಿ ತಗುಲಿಹಾಕಿದ್ದ ಅಂಗೈಯಗಲದ ಹರಿದ ಬಿಳಿಹಾಳೆಯ ತುಂಡೊಂದನ್ನು ನೀಡಿದ. ಆ ಚೀಟಿಯಲ್ಲಿ ಶ್ರೀನಾಥ್ ಎಂದು ಬರೆಯುವಾಗಲೇ ನನಗೆ ನನ್ನ ಕೈ ಕೂಡ ನಡುಗುತ್ತಿರುವ ಸತ್ಯ ಅರಿವಾದದ್ದು.

ಒಳಹೋಗಿ ಹೊರಬಂದವನೇ ಹುಸಿನಗೆ ನಕ್ಕು ಒಳಹೋಗುವಂತೆ ಸನ್ನೆ ಮಾಡಿ ಎತ್ತಲೋ ನಡೆದುಹೋದ. ನಾನಾದರೋ ಚಾರ್ಲಿ ಚಾಪ್ಲಿನ್‌ನಂತೆ ಅತ್ತ ಇತ್ತ ನೋಡುತ್ತ ಒಂದೊಂದೇ ಕಳ್ಳ ಹೆಜ್ಜೆಗಳನ್ನಿಡುತ್ತ ಬಾಗಿಲನ್ನು ತಳ್ಳುತ್ತ, ಇಣುಕಿ ನೋಡುತ್ತ ಒಳಹೋದೆ. ಯಾವುದೋ ಘನ ಗಂಭೀರ ಚಿಂತನೆಯಲ್ಲಿದ್ದಂತೆ ಕಂಡ ಹೊಸ ಮುಖದ ಮುಂದೆ ನಾನು ಸಾರ್ ಎಂದೂ ಅನ್ನದೆ ಎಷ್ಟೋ ಹೊತ್ತು ನಿಂತೇ ಇದ್ದೆ. ಅಗಾಧ ಸಮಯದ ನಂತರ ಯಾವುದೋ ನೆರಳನ್ನು ಕಂಡವರಂತೆ ತಲೆಯೆತ್ತಿ ನೋಡಿ, ಮರೆತೇಹೋದವರಂತೆ ನಟಿಸುತ್ತ, ಎದುರಿನ ಕುರ್ಚಿ ತೋರಿಸಿ ಕೂರುವಂತೆ ಹೇಳಿದರು. ನಾನು 'ಪರವಾಗಿಲ್ಲ ಸಾರ್' ಎಂದು ಕೈ ಹೊಸೆಯುತ್ತ ನಿಂತೇ ಇದ್ದೆ. 'ನಿಮ್ಮ ಬಗ್ಗೆ ಬಹಳ ಕೇಳಿದ್ದೆ ಕಣ್ರೀ...